127

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2022-23/ 5582-87 ದಿನಾಂಕ: 29.12.2022

## ಸಭೆಯ ನಡಾವಳಿಗಳು

ದಿನಾಂಕ 22.12.2022 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಸೋಮರಾಜು : ಅಧೀಕ್ಷಕ ಇಂಜಿನಿಯರ್(ವಿ)ಚಾವಿಸನಿನಿ ಕಾ&ಪಾ ಚಾ.ನಗರ ಮತ್ತು ಕೊಡಗು ವೃತ್ತ, ಮೈಸೂರು
2. ಶ್ರೀಮತಿ.ಅನಿತಾ ಬಾಯಿ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಕೆ.ಎಂ.ದಿಲೀಪ್ : ಪ್ರಭಾರ ಸಹಾಯಕ ಇಂಜಿನಿಯರ್(ತಾಂ), ವಿರಾಜಪೇಟೆ
5. ಶ್ರೀ.ಹೆಚ್.ಎಸ್.ರಮೇಶ್ : ಪ್ರಭಾರ ಸಹಾಯಕ ಇಂಜಿನಿಯರ್(ವಿ), ಸೆಸ್ಕ್, ವಿರಾಜಪೇಟೆ.
6. ಶ್ರೀ.ಕೆ.ಎಸ್.ಸ್ವರಾಗ್ : ಕಿರಿಯ ಇಂಜಿನಿಯರ್(ತಾಂ), ಸೆಸ್ಕ್, ಸಿದ್ದಾಪುರ.
7. ಶ್ರೀ.ಮನುಕುಮಾರ್.ಹೆಚ್.ಜಿ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಅಮ್ಮತ್ತಿ.
8. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಪಾಲಿಬೆಟ್ಟ.
9. ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು,ಕಂದಾಯ ಶಾಖೆ, ಸೆಸ್ಕ್,ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಾದ ಶ್ರೀ.ಸೋಮರಾಜು ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು, ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀಮತಿ.ಇಂದಿರಾ ಅಯ್ಯಪ್ಪ ಕಾರ್ಮಾಡು ಗ್ರಾಮ, ಅಮ್ಮತ್ತಿ ದೂ: 9880000346 | • ಸದರಿಯವರ ಆರ್.ಆರ್.ಸಂಖ್ಯೆ KRAEH25322 ಗೆ ಅಧಿಕ ಬಿಲ್ ಬಂದಿರುವುದಾಗಿ ತಿಳಿಸಿ, ಸುಮಾರು 5 ವರ್ಷಗಳಿಂದ ದೂರು ಸಲ್ಲಿಸಿದರು ಈವರಗೆ ಸರಿಪಡಿಸಿಕೊಟ್ಟಿರುವುದಿಲ್ಲವೆಂದು ದೂರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ರವರು ಅಮ್ಮತ್ತಿ ಶಾಖಾಧಿಕಾರಿಯವರಾದ ಶ್ರೀ.ಮನುಕುಮಾರ್ ರವರಿಗೆ 5 ವರ್ಷಗಳಿಂದ ಕ್ರಮ ಕೈಗೊಳ್ಳದಿರುವ ಬಗ್ಗೆ ತಮ್ಮ ಅಸಮದಾನ ವ್ಯಕ್ತಪಡಿಸಿ ಕೂಡಲೇ ಸದರಿಯವರ ಮಾಪಕವನ್ನು ಪರಿಶೀಲಿಸಿ ಕಂದಾಯ ಶಾಖೆಯಲ್ಲಿ ಸರಿಪಡಿಸಿಕೊಡುವಂತೆ ಸೂಚಿಸಿದರು. |

| | | | |
|---|---|---|---|
| 2 | ಶ್ರೀ.ಗೋವಿಂದ ನಾಯಕ.ಪಿ. ಪೆರಂಬಾಡಿ ಗ್ರಾಮ ಮತ್ತು ಅಂಚೆ ದೂ.9740974171 | • ತಮ್ಮ ಮೊದಲನೆ ಪೆರಂಬಾಡಿ ಗ್ರಾಮದಲ್ಲಿ ಅತಿ ಕಡು ಬಡವರಾದ ಶ್ರೀ.ಶಿವದಾಸ್ ಎಂಬ ಅನಾಥ ವೃದ್ದರಿದ್ದು, ಸದರಿಯವರ ಮನೆಗೆ ಈಗಾಗಲೇ ತಮ್ಮ ವತಿಯಿಂದ ಮನೆಯ ವೈರಿಂಗ್ ಮಾಡಿಸಿಕೊಟ್ಟಿದ್ದು ಯಾವುದಾದರು ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ಕೋರಿದರು. | * ಈ ಬಗ್ಗೆ ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ಸದ್ಯ ಯಾವುದೇ ಯೋಜನೆಗಳು ಚಾಲ್ತಿಯಿರುವುದಿಲ್ಲ, ಆದುದರಿಂದ ಸದರಿ ಸ್ಥಾವರಕ್ಕೆ ಠೇವಣಿ ಮೊತ್ತ ಪಾವತಿಸಿದಲ್ಲಿ ಇಲಾಖೆಯಿಂದ ವಿದ್ಯುತ್ ಕಂಬ ಮತ್ತು ಇತರೆ ಪರಿಕರಗಳನ್ನು ನೀಡುವುದಾಗಿ ತಿಳಿಸಿ ಕೂಡಲೇ ಅರ್ಜಿ ನೊಂದಾಯಿಸಿಕೊಳ್ಳುವಂತೆ ತಿಳಿಸಿದರು. |
| 3 | ಶ್ರೀ.ಅರುಣಾ ಎಂ.ಎಸ್ ಬೊಳ್ಳುಮಾಡು ಗ್ರಾಮ ದೂ:9480653178 | • ತಾವು ವಿರಾಜಪೇಟೆ ಶಾಖೆಯ ಗ್ರಾಹಕರಾಗಿದ್ದು ತಮಗೆ ಮೂರ್ನಾಡು ಶಾಖಾ ವ್ಯಾಪ್ತಿಯ ಪಾರಾಣೆ ಭಾಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಬೊಳ್ಳುಮಾಡು ವ್ಯಾಪ್ತಿಗೆ ಅಧಿಕ ವಿದ್ಯುತ್ ಅಡಚಣೆಯಿದ್ದು ಹಾಲಿಯಿರುವ ಬೇತಿ ವಿದ್ಯುತ್ ಮಾರ್ಗದಿಂದ ಲಿಂಕ್ ಮಾಡುವಂತೆ ಕೋರಿದರು. | * ಉತ್ತರಿಸಿದ ಕಾರ್ಯನಿರ್ವಾಹಕ ಇಂಜಿನಿಯರ್ ಸದರಿ ವ್ಯಾಪ್ತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು.<br>ಸದರಿ ಲಿಂಕ್ ಲೈನ್‌ಗೆ ಬಡ್ಜೆಟ್ ಇದ್ದಲ್ಲಿ ಕೂಡಲೇ ಮಾಡಲಾಗುವುದು ಇಲ್ಲದಿದ್ದಲ್ಲಿ ಹೊಸ ಬಡ್ಜೆಟ್‌ಗೆ ಮೇಲಧಿಕಾರಿಯವರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿದರು. |
| 4 | ಶ್ರೀಮತಿ.ಚಿನ್ನ ಗಂಡ:ದಿ:ಅಣ್ಣು, ಮೈತಾಡಿ ಗ್ರಾಮ ದೂ:8971132963 | • ತಮ್ಮಸ್ಥಾವರ ಮಾಪಕವನ್ನು ಮಾರ್ಗದಾಳು ಬಿಲ್ ಬಾಕಿಯಿರುವುದಾಗಿ ತಿಳಿಸಿ ಕಳಚಿಕೊಂಡು ಹೋಗಿದ್ದು, ಮಾಪಕವನ್ನು ಜೋಡಿಸಿ ವಿದ್ಯುತ್ ಸಂಪರ್ಕ ಒದಗಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ಸದರಿ ವಿಷಯದ ಬಗ್ಗೆ ಶಾಖಾಧಿಕಾರಿಯವರನ್ನು ವಿಚಾರಿಸಿದಾಗ, ಶಾಖಾಧಿಕಾರಿಗಳಾದ ಶ್ರೀ.ರಮೇಶ್ ರವರು ಸದರಿಯವರ ವಿದ್ಯುತ್ ಸ್ಥಾವರದಲ್ಲಿ 8000/-ಕ್ಕೂ ಅಧಿಕ ಬಿಲ್‌ಬಾಕಿಯಿದ್ದುದರಿಂದ ಮಾಪಕವನ್ನು ಕಳಚಿರ ಬಹುದೆಂದು ತಿಳಿಸಿ ತಾವು ಸದರಿಯವರ ಆರ್.ಆರ್.ಸಂಖ್ಯೆಯನ್ನು ಗಣಕ ತಂತ್ರಾಂಶದಲ್ಲಿ ಪರಿಶೀಲಿಸುವುದಾಗಿ ತಿಳಿಸಿದರು,<br>ಮುಂದುವರಿದು ಸದರಿಯವರು ಎಸ್.ಸಿ ಜಾತಿಗೆ ಸೇರಿದ್ದು ಎಲ್.ಟಿ-1 ಜಕಾತಿಯಲ್ಲಿರುವುದರಿಂದ ಸದರಿಯವರ ದಾಖಲಾತಿಗಳನ್ನು ಪಡೆದುಕೊಂಡು ಅಮೃತ ಜ್ಯೋತಿಯಲ್ಲಿ ನಮೂದಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್(ವಿ) ರವರಿಗೆ ಸೂಚಿಸಿದರು. |
| 5 | ಶ್ರೀ.ಕೂತಂಡ ಸಚಿನ್ ಶ್ರೀ.ಸತೀಶ್ ಶ್ರೀ.ಅರುಣ ಮಲೆತಿರಿಕೆ ಬೆಟ್ಟ, ವಿರಾಜಪೇಟೆ ದೂ:9008738243 | • ಮಲೆತಿರಿಕೆ ಬೆಟ್ಟದಲ್ಲಿರುವ ವಿದ್ಯುತ್ ಮಾರ್ಗವು ತೀರಾ ಕೆಳಮಟ್ಟದಲಿದ್ದು ಜನರು ಓಡಾಡುವ ಪ್ರದೇಶವಾಗಿರುವುದರಿಂದ ಅಪಾಯಕರವಾಗಿದ್ದು ಸರಿಪಡಿಸಿಕೊಡುವಂತೆ ಕೋರಿದರು.<br>• ಹಾಲಿಯಿರುವ 33/11 ಕೆ.ವಿ ಮಾರ್ಗವನ್ನು ಸ್ಥಳಾಂತರ ಮಾಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜನಿಯರ್(ವಿ) ಸದರಿ ಮಾರ್ಗಕ್ಕೆ ಆನೆ ಕಾರಿಡಾರ್ ಯೋಜನೆಯಡಿ ಮಧ್ಯಂತರ ಕಂಬ ಅಳವಡಿಸಿ ಮಾರ್ಗವನ್ನು ಎತ್ತರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>* ಈ ಬಗ್ಗೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈಗಾಗಲೇ ಮಡಿಕೇರಿ-ವಿರಾಜಪೇಟೆ 66 ಕೆ.ವಿ ವಿದ್ಯುತ್ ಮಾರ್ಗದ ಕಾರ್ಯವು ಚಾಲನೆಯಲ್ಲಿದ್ದು, ಚಾಲನೆಗೊಂಡ ನಂತರ ಹಾಲಿಯಿರುವ 33 ಕೆ.ವಿ ಮಾರ್ಗವನ್ನು ಕಡಿತಗೊಳಿಸಲಾಗುವುದಾಗಿ ತಿಳಿಸಿದರು. |

| | | | |
|---|---|---|---|
| 6 | ಶ್ರೀ.ಅನೀಸ್ ಮತ್ತು ಇತರರು, ವಿಜಯನಗರ ದೂ:9731503047 | • ಅನೀಸ್ ಮತ್ತು ಇತರರು ಪಟ್ಟಣ ಪಂಚಾಯ್ತಿ ಸದಸ್ಯರಾದ ಶ್ರೀ.ಮತೀನ್ ಎಂಬುವವರಿಂದ ವಸತಿ ಪ್ರದೇಶವನ್ನು ಖರೀದಿಸಿ ಮನೆಯನ್ನು ಕಟ್ಟಿದ್ದು ಸದರಿ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದಾಗ, ಸದರಿ ವಸತಿ ಪ್ರದೇಶವು ಬಡಾವಣೆಯಾಗಿದ್ದು ಹೊಸ ಪರಿವರ್ತಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳುವಂತೆ ತಿಳಿಸಿರುತ್ತಾರೆ, ಅಲ್ಲಿ ಮನೆ ಕಟ್ಟಿಕೊಂಡಿರುವ ಎಲ್ಲಾ ಜನಗಳು ಬಡವರಾಗಿದ್ದು ಪರಿವರ್ತಕವನ್ನು ಅಳವಡಿಸಿಕೊಳ್ಳಲು ಸಾದ್ಯವಿಲ್ಲ ಆದುದರಿಂದ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ)ನಿಗಮದ ನಿಯಮಾನುಸಾರ ವಸತಿ ಬಡಾವಣೆಯಾಗಿದ್ದಲ್ಲಿ ಖಂಡಿತವಾಗಿ ಸ್ವಯಂ ನಿರ್ವಹಣಾ ಯೋಜನೆಯಡಿ ಪರಿವರ್ತಕವನ್ನು ಅಳವಡಿಸಿವಿದ್ಯುತ್‌ಸಂಪರ್ಕ ಪಡೆದುಕೊಳ್ಳಬೇಕಾಗಿರುವುದರಿಂದ, ಬಡಾವಣೆಯ ಮಾಲಿಕರಿಗೆ ತಿಳಿಸಿ ಪರಿವರ್ತಕವನ್ನು ಅಳವಡಿಸಲು ತಿಳಿಸುವಂತೆ ಹೇಳಿದರು, |
| 7 | ಶ್ರೀ.ಗಣೇಶ್ ಮಾಜಿ ತಾಲ್ಲೂಕು ಪಂಚಾಯ್ತಿ ಸದಸ್ಯರು ಮತ್ತು ವಿದ್ಯುತ್ ಗುತ್ತಿಗೆದಾರರು, ಆರ್ಜಿ ಗ್ರಾಮ ಮತ್ತು ಅಂಚೆ ದೂ:9448325658 | • ಆರ್ಜಿ ಗ್ರಾಮದ 1ನೇ ಪೆರಂಬಾಡಿ ವ್ಯಾಪ್ತಿಯಲ್ಲಿ ಸುಮಾರು 50 ಕ್ಕೂ ಹೆಚ್ಚು ಮನೆಗಳಿದ್ದು ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ಸದರಿ ವ್ಯಾಪ್ತಿಗೆ ಅಭಿವೃದ್ಧಿ ಯೋಜನೆಯಡಿ ಹೊಸ ಪರಿವರ್ತಕವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ವಿರಾಜಪೇಟೆ ಶಾಖಾಧಿಕಾರಿಗಳಿಗೆ ಸೂಚಿಸಿದಾಗ, ಶಾಖಾಧಿಕಾರಿಯವರು ಈಗಾಗಲೇ ಸದರಿ ಸ್ಥಳವನ್ನು ಪರಿಶೀಲಿಸಿ ಹೊಸ ಅಂದಾಜು ಪಟ್ಟಿ ತಯಾರಿಸಿದ್ದು ಆದಷ್ಟು ಬೇಗ ವಿಭಾಗೀಯ ಕಛೇರಿಗೆ ಸಲ್ಲಿಸಲಾಗುವುದಾಗಿ ತಿಳಿಸಿದರು. |
| 8 | ನೇತ್ರಾವತಿ ಅಧ್ಯಕ್ಷರು, ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯ್ತಿ ದೂ:9483511740 | • ಬಿ.ಶೆಟ್ಟಿಗೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕಾಕೆಮನೆ, ನಾಮೇರ ಕುಟುಂಬಸ್ಥರ ಮನೆಗಳ ವ್ಯಾಪ್ತಿಯಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ದಯವಿಟ್ಟು ಹೊಸ ಪರಿವರ್ತಗಳನ್ನು ಅಳವಡಿಸಿ ಸಮಸ್ಯೆಯನ್ನು ಪರಿಹರಿಸುವಂತೆ ಕೇಳಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ಸದರಿ ವ್ಯಾಪ್ತಿಗೆ ಅಭಿವೃದ್ಧಿ ಯೋಜನೆಯಡಿ ಹೊಸ ಪರಿವರ್ತಕವನ್ನು ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ವಿರಾಜಪೇಟೆ ಶಾಖಾಧಿಕಾರಿಗಳಿಗೆ ಸೂಚಿಸಿದಾಗ, ಶಾಖಾಧಿಕಾರಿ ರವರು ಈಗಾಗಲೇ ಸದರಿ ಸ್ಥಳವನ್ನು ಪರಿಶೀಲಿಸಿ ಹೊಸ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದ್ದು, ವಿಭಾಗೀಯ ಕಛೇರಿಯಿಂದ ಅನುಮೋದನೆ ದೊರೆಯಬೇಕಾಗಿರುವುದಾಗಿ ತಿಳಿಸಿದರು. |
| 9 | ಅಧ್ಯಕ್ಷರು ಮತ್ತು ಸದಸ್ಯರು ಪರವಾನಗಿ ಪಡೆದ ಗುತ್ತಿಗೆದಾರರ ಸಂಘ, ಮಡಿಕೇರಿ ಜಿಲ್ಲೆ | • ಮಡಿಕೇರಿ ಜಿಲ್ಲಾ ವ್ಯಾಪ್ತಿಯಲ್ಲಿ ಸ್ವಯಂ ನಿರ್ವಹಣಾ ಯೋಜನೆಯಡಿ ಉಪವಿಭಾಗ ದಲ್ಲಿ ಕಾರ್ಯ ನಿರ್ವಹಿಸಲು 25000/- ಮಾತ್ರ ಇದ್ದು ಸದರಿ ಮೊತ್ತವನ್ನು 100000/- ಲಕ್ಷಕ್ಕೆ ಹೆಚ್ಚಿಸುವಂತೆ ಕೋರಿದರು. | * ಉತ್ತರಿಸಿದ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಸದರಿ ವಿಷಯದ ಬಗ್ಗೆ ಈಗಾಗಲೇ ಸ್ವಯಂ ನಿರ್ವಹಣೆಯ ಕಾರ್ಯ ನಿರ್ವಹಣೆಯ ಮೊತ್ತವನ್ನು ಹೆಚ್ಚಿಸಲು ವೃತ್ತ ಕಛೇರಿಗೆ ಪತ್ರ ಬರೆಯಲಾಗಿರುವುದಾಗಿ ತಿಳಿಸಿದರು. |

ಮುಂದುವರಿದು ಅಧೀಕ್ಷಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಅಮೃತ ಯೋಜನೆಯಡಿ ಎಲ್ಲಾ ಎಲ್.ಟಿ-1 ಮತ್ತು ಎಲ್.ಟಿ-2 ಜಕಾತಿಯ ಎಸ್.ಸಿ/ಎಸ್.ಟಿ ಗ್ರಾಹಕರಿಂದ ಆದಷ್ಟು ಬೇಗ ಅಗತ್ಯ ದಾಖಲೆಗಳನ್ನು ಪಡೆದುಕೊಂಡು ಸುವಿದ ತಂತ್ರಾಂಶದಲ್ಲಿ ನಮೂದಿಸುವಂತೆ ಸೂಚಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

**ಪ್ರತಿಯನ್ನು:-**

1 ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2 ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3 ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4 ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ.
5 ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6 ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ.
7 ಕಛೇರಿ ಕಡತ.